## ವಿದ್ಯಾ 'ದಿ ಬೆಸ್ಟ್'



ವರ್ಷದ ಆರಂಭದಲ್ಲೇ ಪ್ರಶಸ್ತಿ. 'ತುಮ್ಹಾರಿ ಸುಲು' ಸಿನಿಮಾದ ಸುಲೋಚನಾಳ ಪಾತ್ರದಲ್ಲಿ ಲಕ್ಷಾಂತರ ಮಹಿಳೆಯರು ತಮ್ಮನ್ನೇ ತಾವು ನೋಡಿಕೊಂಡದ್ದು ಸುಳ್ಳಲ್ಲ. ವಿದ್ಯಾ ಬಾಲನ್ ಆ ಪಾತ್ರಕ್ಕೆ ಜೀವ ತುಂಬಿದ ಪರಿ ಹಾಗಿತ್ತು. ಬಾಲಿವುಡ್‌ನಲ್ಲಿ 'ಪವರ್ ಬ್ಯಾಂಕ್' ಪ್ರತಿಭಾವಂತೆ ಎಂದೇ ಹೆಸರು ಪಡೆದಿರುವ ವಿದ್ಯಾ, ಈಗ ಆ ಪಾತ್ರದ ನಟನೆಗೆ 63ನೇ ಫಿಲಂಫೇರ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. 2017ರ ಹತ್ತು ಹಲವು ಅತ್ಯುತ್ತಮ ಚಿತ್ರಗಳ ನಡುವೆ ಅತ್ಯುತ್ತಮ ನಟಿ ಪ್ರಶಸ್ತಿ ಗೆಲ್ಲುವುದು ಯಾರಿಗೇ ಆದರೂ ಸುಲಭವೇನೂ ಆಗಿರಲಿಲ್ಲ. ಆದರೆ ವಿದ್ಯಾಳದ್ದು ಕೇಕ್ ವಾಕ್!

1995ರಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಟೀವಿ ಸೀರಿಯಲ್ 'ಹಮ್ ಪಾಂಚ್'ನಲ್ಲಿ ಮಿಂಚಿದಾಕೆ ಈ ವಿದ್ಯಾ. ಆದರೆ ಸಿನಿಮಾ ಪ್ರವೇಶ ಅಷ್ಟು ಸುಲಭವಾಗಲಿಲ್ಲ. ಬಂಗಾಳಿ ಸಿನಿಮಾವೊಂದರಲ್ಲಿ ಸಿಕ್ಕಿದ ಅವಕಾಶವನ್ನು ಸಮರ್ಥವಾಗಿ ಉಪಯೋಗಿಸಿಕೊಂಡು ರಾಜ್ಯ ಪ್ರಶಸ್ತಿ ಗಳಿಸಿದ ವಿದ್ಯಾ, 10 ವರ್ಷಗಳ ಹಿಂದಿಯಲ್ಲಿ 'ಪರಿಣೀತಾ' ಚಿತ್ರಕ್ಕೆ ಹೀರೋಯಿನ್ ಆದದ್ದು. ಆ ಚಿತ್ರದಲ್ಲೇ ಆಕೆಯ ಅಭಿನಯಕ್ಕೆ ಬಾಲಿವುಡ್ ಬೌಲ್ಡ್ ಆಯಿತು. ಅಲ್ಲಿಂದೀಚೆಗೆ ಶ್ರಮ ಮತ್ತು ಯಶಸ್ಸು ಎರಡೂ ಜೊತೆಯಾಗಿ ಪಯಣಿಸಿದವು. ಪಾ, ಕಹಾನಿ, ದಿ ಡರ್ಟಿ ಪಿಕ್ಚರ್ ಮತ್ತು ಕಳೆದ ವರ್ಷದ 'ತುಮ್ಹಾರಿ ಸುಲು' ಈಕೆಯ ಮಹತ್ವದ ಹೆಜ್ಜೆ ಗುರುತುಗಳಾದವು.

ಸಾಗರಿಕಾ ಘೋಷ್ ಬರೆದಿರುವ 'ಇಂದಿರಾ– ಇಂಡಿಯಾಸ್ ಮೋಸ್ಟ್ ಪಾಪ್ಯುಲರ್ ಪ್ರೈಮ್ ಮಿನಿಸ್ಟರ್' ಪುಸ್ತಕದ ಹಕ್ಕುಗಳನ್ನು ಈಗಾಗಲೆ ಖರೀದಿಸಿರುವ ವಿದ್ಯಾ, ಇಂದಿರಾ ಗಾಂಧಿಯ ಪಾತ್ರವನ್ನು ಆವಾಹಿಸಿಕೊಳ್ಳಲು ಎಲ್ಲ ಸಿದ್ಧತೆ ಮಾಡಿಕೊಂಡಿದ್ದಾರಂತೆ.

## ಇರ್ಫಾನ್ ಮತ್ತು ಪ್ರಶಸ್ತಿ

ದೇಶಭಾಷೆಗಳೆಲ್ಲ ಇಂಗ್ಲಿಷಿನ ಹೊಡೆತಕ್ಕೆ ಥರಗುಟ್ಟುತ್ತಿರುವ ಸಂದರ್ಭದಲ್ಲಿ ಕಳೆದ ವರ್ಷ ಹೊರಬಂದ ಸಿನಿಮಾ 'ಹಿಂದಿ ಮೀಡಿಯಂ.' ಆ ಚಿತ್ರದಲ್ಲಿ ಇರ್ಫಾನ್ ಖಾನ್ ನಿರ್ವಹಿಸಿದ ಪಾತ್ರಕ್ಕೆ ಫಿಲಂಫೇರ್‌ನ 'ಅತ್ಯುತ್ತಮ ನಟ' ಪ್ರಶಸ್ತಿ ಲಭಿಸಿದೆ. ಸಾಕೇತ್ ಚೌಧುರಿ ನಿರ್ದೇಶನದ ಈ ಚಿತ್ರ ಕನ್ನಡಿಗರೂ ನೋಡಲೇಬೇಕಾದದ್ದು.

1984ರ ಎನ್‌ಎಸ್‌ಡಿ ಪದವೀಧರನಾದ ಇರ್ಫಾನ್‌ಗೆ ಪ್ರಶಸ್ತಿಗಳು ಹೊಸತೇನಲ್ಲ. ಪ್ರತಿವರ್ಷವೂ ಒಂದಲ್ಲ ಒಂದು ಪ್ರಶಸ್ತಿ ಸಿಗುತ್ತಿದೆ. ಈ ಸಲದ್ದು ನಾಲ್ಕನೇ ಫಿಲಂಫೇರ್ ಪ್ರಶಸ್ತಿ. 2013ರಲ್ಲಿ ರಾಷ್ಟ್ರಪ್ರಶಸ್ತಿಯನ್ನೂ ಗೆದ್ದುಕೊಂಡಿದ್ದ. ಬಾಲಿವುಡ್‌ನಲ್ಲಿ ಸದ್ಯಕ್ಕೆ ಇರ್ಫಾನ್ ಬಿಡುವಿಲ್ಲದ ನಟ. ಕೈಯಲ್ಲಿ ಒಟ್ಟು ಎಂಟು ಚಿತ್ರಗಳಿವೆ. ಒಂದಕ್ಕಿಂತ ಒಂದು ಭಿನ್ನ ಪಾತ್ರಗಳು. 1988ರಲ್ಲಿ ಆಸ್ಕರ್ ಪ್ರಶಸ್ತಿಗೆ ಪ್ರವೇಶ ಪಡೆದಿದ್ದ 'ಸಲಾಂ ಬಾಂಬೆ'ಯಲ್ಲಿ ಸಣ್ಣದೊಂದು ಪಾತ್ರ ನಿರ್ವಹಿಸಿದ್ದ ಇರ್ಫಾನ್, ಈಗಂತೂ ಅಂತರರಾಷ್ಟ್ರೀಯ ಮಟ್ಟದ ನಟ. ಈ ವರ್ಷ ಆತ ಅಭಿನಯಿಸಿದ ಎರಡು ಇಂಗ್ಲಿಷ್ ಚಿತ್ರಗಳೂ ತೆರೆ ಕಾಣಲಿವೆ.

■ ಬಿಂದು

